ವಿವಸದ ಒಳಗಡೆ ಭೂಸ್ವಾಧೀನ ಮಾಡಿಕೊಂಡು ಅವರಿಗೆ ಹಣ ಕೊಡುತ್ತೇವೆ ಎಂದು ಹೇಳಿ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಇಷ್ಟು ವರ್ಷ ಅವರೇ ಅಧಿಕಾರದಲ್ಲಿದ್ದರೂ ಏಕೆ ಕೊಡಲಿಲ್ಲ ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ.

ಶ್ರೀ ವಿ. ಮುನಿಯಪ್ಪ : ನಮ್ಮ ಗಮನಕ್ಕೆ ಬಂದಿರುವುದು ಇತ್ತೀಚೆಗೆ. ನಮ್ಮ ಕಾಲದಲ್ಲಿಯೇ ತಂದು ಕೊಟ್ಟಿದ್ದರೆ, ನಾವು ವಿಂಡಿತವಾಗಿ ಕೊಡುತ್ತಿದ್ದೆವು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾವು ಬಂದ ಮೇಲೆ ಇತ್ತೀಚೆಗೆ ಹಣ ಕೊಟ್ಟಿವೆ ಆಗಿದೆ.

ಶ್ರೀ ವಿ. ಮುನಿಯಪ್ಪ : ನಮ್ಮ ಗಮನಕ್ಕೆ ಬಂದಿದ್ದರೆ, ತಕ್ಷಣ ಸರ್ಕಾರ ಅದಕ್ಕೆ ಹಣ ಬಿಡುಗಡೆ ಮಾಡುತ್ತಿತ್ತು.

ಸೂರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಅಂಗನವಾಡಿಗಳ ಸಂಖ್ಯೆ

142 - ಶ್ರೀ ಕುಂಭೆ ಸುಂದರರಾವ್ (ಸೂರತ್ಕಲ್) : ಮಾನ್ಯ ಸಣ್ಣ ನೀರಾವರಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೂರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಅಂಗನವಾಡಿಗಳು ಕಾರ್ಯ ನಿರ್ವಹಿಸುತ್ತಿವೆ?

ಆ) ಕಾರ್ಯ ನಿರ್ವಹಿಸುವವುಗಳಿಗೆ ಕಟ್ಟಡಗಳಿರುವ ಅಂಗನವಾಡಿಗಳು ಎಷ್ಟು, ಎಷ್ಟು ಬಾಡಿಗೆ ಕಟ್ಟಡಗಳಲ್ಲಿವೆ.

ಇ) ಹಾಗಿದ್ದಲ್ಲಿ ಕಟ್ಟಡಗಳನ್ನು ಎಂದು ನಿರ್ಮಿಸಲಾಗುವುದು.

ಈ) ಸ್ಥಳೀಯ ಕಾರ್ಯಕರ್ತೆಯರು ಸೇವೆ ಸಲ್ಲಿಸುತ್ತಿರುವ ಅಂಗನವಾಡಿಗಳು ಸಂಖ್ಯೆ ಎಷ್ಟು, ಸ್ಥಳೀಯರಲ್ಲದವರ ಸ್ಥಾನದಲ್ಲಿ ಸ್ಥಳೀಯರಿಗೆ ಕೊಡುವ ಸರಕಾರದ ಯೋಜನೆ ಇದೆಯೇ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವೆ) :

ಅ) ಸೂರತ್ಕಲ್ ವಿಧಾನ ಸಭಾ ಕ್ಷೇತ್ರದಲ್ಲಿ 72 ಅಂಗನವಾಡಿಗಳು ಕಾರ್ಯ ನಿರ್ವಹಿಸುತ್ತಿವೆ.

ಆ) 10 ಅಂಗನವಾಡಿಗಳು ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿವೆ. ಬಾಡಿಗೆ ಕಟ್ಟಡದಲ್ಲಿ ಯಾವುದೇ ಅಂಗನವಾಡಿಗಳು ನಡೆಯುತ್ತಿಲ್ಲ. ಬದಲಾಗಿ ಉಳಿದ ಅಂಗನವಾಡಿಗಳು ಸಮುದಾಯದ ಅಂದರೆ ಯುವಕ ಮಂಡಲಿ, ಯುವತಿ ಮಂಡಳಿ ಮಹಿಳಾ ಮಂಡಳಿ, ಪಂಚಾಯಿತಿ ಕಟ್ಟಡಗಳಲ್ಲಿ ನಡೆಯುತ್ತಿವೆ.

ಇ) 1996-97ನೇ ಸಾಲಿನಲ್ಲಿ 8 ಅಂಗನವಾಡಿ ಕಟ್ಟಡಗಳನ್ನು ಕಟ್ಟಲು ಯೋಜನೆಯಡಿಯಲ್ಲಿ ಅವಕಾಶ ಕಲ್ಪಿಸಿಕೊಡಲಾಗಿದೆ. ಉಳಿದ ಅಂಗನವಾಡಿಗಳಿಗೆ ಹಂತ ಹಂತವಾಗಿ ಮುಂಬರುವ

ವರ್ಷಗಳಲ್ಲಿ ಕಟ್ಟಡಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ಈ) ಹಾಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಕಾರ್ಯಕರ್ತೆಯರೂ ಸ್ಥಳೀಯರಾಗಿರುತ್ತಾರೆ. ಆದ್ದರಿಂದ ಪ್ರಶ್ನೆಯ ಎರಡನೇ ಭಾಗಕ್ಕೆ ಉತ್ತರ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕುಂಭೆ ಸುಂದರರಾವ್ : ಸನ್ಮಾನ್ಯ ಅಧ್ಯಕ್ಷರೆ ನನ್ನ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಅಂಗನವಾಡಿಗಳು ಇವೆ ಎಂದು ಕೇಳಿದ್ದಕ್ಕೆ 72 ಎಂದು ಹೇಳಿದ್ದಾರೆ. ಸ್ವಂತ ಕಟ್ಟಡ ಕೇಳಿದ್ದಕ್ಕೆ 10 ಮಾತ್ರ ಸ್ವಂತ ಕಟ್ಟಡ ಉಳಿದವೆಲ್ಲಾ ಬೇರೆ ಬೇರೆ ಕಡೆ ನಡೆಯುತ್ತಿದೆ ಎಂದು ಹೇಳಿದ್ದಾರೆ. ಮುಂದೆ ಇದು ಪೂರ್ಣವಾಗಿ ಎಲ್ಲಿ ಸ್ವಂತ ಕಟ್ಟಡ ಆಗುವುದಕ್ಕೆ ವ್ಯವಸ್ಥೆ ಇದೆಯೇ? ಎಂದು ಕೇಳಿದ್ದಕ್ಕೆ 8 ಕಟ್ಟಡಗಳು ಈ ಸಾಲಿನಲ್ಲಿ ಆಗುತ್ತಿರ ಎನ್ನುವಂತಹ ಉತ್ತರ ಬಂದಿದೆ. ಈ ತರಹ ಆದರೆ ಉಳಿದ ಕಟ್ಟಡಗಳು ಪೂರ್ತಿ ಆಗುವುದಕ್ಕೆ ಎಷ್ಟು ವರ್ಷ ಬೇಕು. 54 ಕಟ್ಟಡಗಳು ಆಗಬೇಕು, ವರ್ಷಕ್ಕೆ 8ರಂತೆ ಮಾಡುತ್ತಾ ಹೋದರೆ, ಈ ಅಂಗನವಾಡಿ ಎನ್ನುವುದು ಒಂದು ನಿರಂತರ ಪ್ರಕ್ರಿಯೆ. ಮಕ್ಕಳು ಹುಟ್ಟುತ್ತಾ ಇರುತ್ತಾರೆ, ಅಂಗನವಾಡಿಗೆ ಕಳುಹಿಸುತ್ತಾ ಇರುತ್ತಾರೆ. ಹಾಗಿರುವಾಗ ಈ ವ್ಯವಸ್ಥೆ ಸುವ್ಯವಸ್ಥಿತವಾಗಿರಬೇಕಾದರೆ, ಈ ತರಹ 8,6,10 ಈ ತರಹ ಮಾಡುವುದು ಸರಿಯಾಗುವುದಿಲ್ಲ, ಇದು ಒಂದು. ಇನ್ನೊಂದು ಅರ್ಧವಾಗಿ ನಿಂತಿರುವ ಕಟ್ಟಡಗಳು ನನ್ನ ಕ್ಷೇತ್ರದಲ್ಲಿವೆ. ಅದು ಪೂರ್ತಿ ಆಗುವ ಲಕ್ಷಣ ಕಾಣುತ್ತಿಲ್ಲ. ಅದರ ವ್ಯವಸ್ಥೆ ಏನು? ಊರಿನವರು ಸ್ಥಳ ಕೊಟ್ಟರೆ ನೀರು ಕೊಡುತ್ತೀರೋ ಅಥವಾ ಸರ್ಕಾರ ಸ್ಥಳದಲ್ಲಿದ್ದರೆ ಅಲ್ಲಿ ಕಟ್ಟುತ್ತೀರಿ, ಈ ಎಂಟನ್ನು ನೀವು ಏನು ಮಾಡುತ್ತಿದ್ದೀರಿ ಅದು 18 ಆಗುವಂತಹ ಸಂಭವ ಇದೆಯೇ? ಅದಕ್ಕೆ ಉತ್ತರ ಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಹಂತ ಹಂತವಾಗಿ ಅಂಗನವಾಡಿ ಕಟ್ಟಡಗಳನ್ನು ಕಟ್ಟುವುದಕ್ಕೆ ಈಗಾಗಲೇ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಸರ್ಕಾರದ ಸ್ಥಳ ಇದ್ದಾಗಲೂ ಕಟ್ಟುತ್ತೇವೆ. ಅಥವಾ ಊರಿನವರು ಸ್ಥಳ ಕೊಟ್ಟಾಗ ಕೂಡ ಅವಕಾಶ ಇದೆ. ರಾಜ್ಯದಲ್ಲಿ ಸುಮಾರು 7,196 ಅಂಗನವಾಡಿ ಕೇಂದ್ರಗಳಲ್ಲಿ ಸ್ವಂತ ಕಟ್ಟಡ ಇದೆ. ಗೌರವಾನ್ವಿತ ಸದಸ್ಯರಿಗೆ ತಿಳಿಸಿದಂತೆ ಇರವತ್ತೊಂದು ಸ್ವಂತ ಕಟ್ಟಡಗಳಿದ್ದು ಅದರಲ್ಲಿ ಎಂಟು ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿ ಇರುತ್ತವೆ. ಉಳಿದ ಅಂಗನವಾಡಿಗಳು, ಯುವಕ ಮಂಡಲ, ಯುವತಿ ಮಂಡಲ, ಮಹಿಳಾ ಮಂಡಲ, ಪಂಚಾಯಿತಿ ಕಟ್ಟಡದಲ್ಲಿ ನಡೆಯುತ್ತಿವೆ. ಯಾವುದನ್ನೂ ಬೇರೆ ಕಡೆ ನಡೆಸುತ್ತಿಲ್ಲ. ಅಲ್ಲಿ ಕಾರ್ಯ ನಿರ್ವಹಣೆ ಮಾಡುತ್ತಿವೆ. 1996-97ನೇ ಸಾಲಿನ ಯೋಜನೆಯಲ್ಲಿ ಎಂಟು ಅಂಗನವಾಡಿ ಕಟ್ಟಡವನ್ನು ಕಟ್ಟಲು ಅನುವು ಮಾಡಿಕೊಟ್ಟಿದೆ. ಉಳಿದ ಅಂಗನವಾಡಿಗಳಿಗೆ ಮುಂಬರುವ ವರ್ಷಗಳಲ್ಲಿ ಹಂತ ಹಂತವಾಗಿ ಸ್ವಂತ ಕಟ್ಟಡಗಳನ್ನು ನಿರ್ಮಾಣ ಮಾಡತಕ್ಕಂಥ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಕುಂಭೆ ಸುಂದರರಾವ್ : ಕೊನೆಯದಾಗಿ, ಬೇರೆ ಬೇರೆ ಯುವಕ ಮಂಡಳಗಳಲ್ಲಿ, ಯುವತಿ ಮಂಡಳಗಳಲ್ಲಿ ನಡೆಯುತ್ತಿರೆ ಎಂದು ಹೇಳಿದ್ದೀರಿ. ಆದರೆ ನನ್ನ ಕ್ಷೇತ್ರದಲ್ಲಿ ಮನೆಯಲ್ಲಿ ಅಂಗನವಾಡಿಗಳು ನಡೆಯುತ್ತಿವೆ. ಆ ಮನೆಯವರಿಗೆ ಆ ಮಕ್ಕಳ ಮೇಲೆ ಒಂದು ಸಲ ಸಿಟ್ಟು ಬಂದರೆ ಅಂಗನವಾಡಿ ಮುಚ್ಚುವ ಸ್ಥಿತಿ ಇದೆ. ಇನ್ನೊಂದು ಸ್ಥಳೀಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತೇವೆಂದು

ಹೇಳಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಹಾಗೆ ಆಗಿಲ್ಲ. ಹೊರಗಿನವರನ್ನು ತಂದು ಸ್ಥಳೀಯ ಅಭ್ಯರ್ಥಿಯನ್ನು ಕೈಬಿಟ್ಟಂತ ಪ್ರಕರಣ ಇದೆ. ಅದರ ಬಗ್ಗೆ ಪರಿಶೀಲನೆ ನಡೆಸಿ ಕ್ರಮವನ್ನು ಕೈಗೊಳ್ಳುತ್ತೀರೋ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಅಂಗನವಾಡಿ ಸಮುದಾಯಕ್ಕೆ ಆಯ್ಕೆ ಮಾಡಬೇಕಾದರೆ ಅವರು 18ರಿಂದ 44 ವರ್ಷ ವಯಸ್ಸಿನ ಸ್ಥಳೀಯ ಮಹಿಳೆಯರಾಗಿರಬೇಕು. ಎಸ್.ಎಸ್.ಎಲ್.ಸಿ. ಅಥವಾ ಅದಕ್ಕಿಂತ ಕಡಿಮೆ ವಿದ್ಯಾರ್ಹತೆ ಇದ್ದರೂ ಕೂಡ ಅವರನ್ನು ಪರಿಗಣಿಸಬಹುದು. ಆದರೆ ಪರಿಗಣಿಸಿದವರಲ್ಲಿ ಅವರು ಸ್ಥಳೀಯ ಆಷ್ಟೇ ಅಲ್ಲ, ಅವರು ಸಮುದಾಯದಲ್ಲಿ ಒಮ್ಮತ ಇರುವ ಮಹಿಳೆಯರಾಗಿರಬೇಕು. ಸುರತ್ಕಲ್ ವಿಧಾನಸಭಾ ಕ್ಷೇತ್ರದಲ್ಲಿರುವ ಎಲ್ಲಾ 72 ಅಂಗನವಾಡಿ ಕಾರ್ಯಕರ್ತೆಯರು ಸ್ಥಳೀಯ ಮಹಿಳೆಯರಾಗಿದ್ದಾರೆ. ಅದರಲ್ಲಿ ಯಾವ ಅನುಮಾನವೂ ಇಲ್ಲ.

ಶ್ರೀ ಕುಂಪಿ ಸುಂದರರಾವ್ : ನನ್ನ ಹತ್ತಿರ ಮಾಹಿತಿ ಇದೆ. ನಾನು ನಿಮಗೆ ಕೊಡುತ್ತೇನೆ

ಅಧ್ಯಕ್ಷರು : ತಂದು ಕೊಡಿ. ನಿರ್ದಿಷ್ಟವಾದ ಪ್ರಕರಣ ಇದ್ದರೆ ತಂದುಕೊಡಿ. ಕ್ರಮ ತೆಗೆದು ಕೊಳ್ಳುತ್ತಾರೆ.

ಶ್ರೀ ಎಸ್. ಯೋಗೀಶ್ ಭಟ್ಟ : ಅಂಗನವಾಡಿ ಶಿಕ್ಷಕಿಯರ ಸಂಬಳ ಜಾಸ್ತಿ ಮಾಡುವಂಥ ಯೋಜನೆ ಏನಾದರೂ ಸರ್ಕಾರದ ಹತ್ತಿರ ಇದೆಯೇ? ಹಾಗೆ ಆಯಾಗಳಿಗೆ ಕೂಡ ಕೊಡುವಂಥ ಸಹಾಯಧನವನ್ನು ಹೆಚ್ಚಿಸಲು ಸರ್ಕಾರ ಯೋಚನೆ ಮಾಡುತ್ತಿದೆಯೋ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಅಂಗನವಾಡಿ ಕಾರ್ಯಕರ್ತೆಯರಿಗೆ ಈಗಾಗಲೇ ನವೆಂಬರ್‌ದಿಂದ ನೂರು ರೂಪಾಯಿಗಳನ್ನು ನಮ್ಮ ರಾಜ್ಯಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ. ಎಲ್ಲಾ ಕಡೆ ಕೊಡುತ್ತಿದ್ದೇವೆ. ಆಯಾಗಳ ಬಗ್ಗೆ ಕೂಡ ಪರಿಶೀಲನೆ ಮಾಡುವುದರಲ್ಲಿದ್ದೇವೆ.

ಅಧ್ಯಕ್ಷರು : ಕಾಟಮೇಯವರೇ ನಮ್ಮ ಪ್ರಶ್ನೆಗೆ ಪೂರಕವಾಗಿ ಸಚಿವರು ಸ್ವಲ್ಪ ಸಮಯ ಕೇಳಿದ್ದಾರೆ. ಅದಕ್ಕೆ ವಿಸ್ತೃತವಾದ ಉತ್ತರ ತರಿಸಿಕೊಡುವುದಕ್ಕೆ ಸಮಯ ಕಡಿಮೆ ಇರುವುದರಿಂದ ಸಮಯ ಅಪೇಕ್ಷೆ ಪಟ್ಟಿದ್ದಾರೆ. You will have to kindly co-operate.

ಗದಗ್ ತಾಲ್ಲೂಕಿನ ಈಚಲಹಳ್ಳದಿಂದಾಗ್ಗೂ ನೀರಾವರಿ ಪ್ರದೇಶ.

144 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗದಗ ತಾಲ್ಲೂಕು ಚಿಕ್ಕಹಂದಿಗೋಳ ಗ್ರಾಮದಲ್ಲಿ ಈಚಲಹಳ್ಳಕ್ಕೆ ಕಟ್ಟಿರುವ ಬಾಂದಾರಿನಿಂದ ನೀರಾವರಿಯಾಗುತ್ತಿರುವ ಪ್ರದೇಶಗಳೆಷ್ಟು?